**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.**
**ಸಿ.ಸಿ. ಸಂಖ್ಯೆ. 376/2021**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಮೋಹನ | ಡಿ.ಡಬ್ಲ್ಯೂಃ 3 |
| ತಂದೆಯ ಹೆಸರು | ಃ ತಿಮ್ಮಣ್ಣಗೌಡ | |
| ವಯಸ್ಸು | ಃ 54 ವರ್ಷ | |
| ಉದ್ಯೋಗ | ಃ ಕೃಷಿ | |
| ವಾಸ ಸ್ಥಳ | ಃ ನಂದಿಪುರ, ಮೂಡಿಗೆರೆ | |

ದಿನಾಂಕಃ 07.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಶ್ರೀ ಹೆಚ್.ಆರ್.ಸಿ. ವಕೀಲರಿಂದ ಆರೋಪಿಯ ಪರವಾಗಿಃ**

1. ನನಗೆ ಬೈರವೇಶ್ವರ ಎನ್ನುವ ಕಾಫಿ ಎಸ್ಟೇಟ್ ಇರುತ್ತದೆ. ನಾನು ನನ್ನ ತೋಟದ ಕೆಲಸಕ್ಕೆ ಕೂಲಿ ಆಳುಗಳನ್ನು ಇಟ್ಟುಕೊಂಡಿರುತ್ತೇನೆ. ಆರೋಪಿ ನನಗೆ ಪರಿಚಯ ಇರುವುದಿಲ್ಲ. ಹಣಕಾಸು ವಿಚಾರವಾಗಿ ನಾನು ಆರೋಪಿಗೆ ಯಾವುದೇ ನೋಟೀಸನ್ನು ಕಳುಹಿಸಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಅವಕಾಶ ಕೋರಿದ್ದು ಅವಕಾಶ ನೀಡಲಾಯಿತು.)

**ಪ್ರತಿಕೂಲ ಸಾಕ್ಷಿ ಪಾಟೀ ಸವಾಲುಃ ಶ್ರೀ ಹೆಚ್.ಆರ್.ಸಿ. ವಕೀಲರಿಂದ**

2. ನಿಡಿ-2 ನೋಟೀಸ್ ನಾನು ಆರೋಪಿಗೆ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ನಾನು ಬೂತನಾತೇಶ್ಚರ ದೇವಸ್ಥಾನದಿಂದ ಹಣದ ವ್ಯವಹಾರ ಸಲುವಾಗಿ ನೋಟೀಸ್ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-2 ರಲ್ಲಿರುವ ಸಹಿ ನನ್ನದೇ ಸಹಿ ಎಂದರೆ ಸರಿಯಲ್ಲ. ನಾನು ಆರೋಪಿಯ ಜೊತೆ ಕೂಲಿ ಆಳುಗಳನ್ನು ನನ್ನ ತೋಟಕ್ಕೆ ಸರಬರಾಜು ಮಾಡುವಂತೆ ಕರಾರು ಪತ್ರವನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-1 ಚಾಪಾ ಕಾಗದವನ್ನು ನಾನು ಖರೀದಿ ಮಾಡಿರುವುದಿಲ್ಲ. ನಿಡಿ-1 ರಲ್ಲಿ ಎನ್. ಟಿ. ಮೋಹನ್ ಬೈರವೇಶ್ವರ

ಎಸ್ಟೇಟ್ ಎಂದು ಬರೆದಿರುತ್ತದೆ ಎಂದರೆ ಸರಿ. ದಿನಾಂಕ 03-07-2015 ರಂದು ನಾನು ನಿಡಿ-1 ರ ಚಾಪಾ ಕಾಗದವನ್ನು MASCOPS ರಿಂದ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-1 ಚಾಪಾ ಕಾಗದದಲ್ಲಿ ಒಂದನೇ ಪಕ್ಷಗಾರರಾಗಿ ಎನ್. ಟಿ. ಮೋಹನ್ ಎಂದು ಮತ್ತು ಎರಡನೇ ಪಕ್ಷಗಾರರಾಗಿ ರವಿ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿಯು ಸದರಿ ದಾಖಲೆಯ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.  ಸದರಿ ಚಾಪಾ ಕಾಗದವನ್ನು ಖರೀದಿ ಮಾಡಲು ನಾನೇ ಹಣ ಪಾವತಿ ಮಾಡಿರುತ್ತೇನೆ ಎಂದು ಚಾಪಾ ಕಾಗದದಲ್ಲಿ ನಮೂದು ಇರುತ್ತದೆ ಎಂದರೆ ಸಾಕ್ಷಿಯು ಸದರಿ ದಾಖಲೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ.

3. ನಿಡಿ-1 ಕಾರಾರು ಪತ್ರದಲ್ಲಿ ಬರೆದಿರುವ ವಿವರಗಳನ್ನು ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷಿಯು ಸದರಿ ವ್ಯವಹಾರದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ-1 ಕರಾರು ಪತ್ರ್ರದಲ್ಲಿರುವ ಸಹಿ ನನ್ನದೆ ಸಹಿ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಡಿ-1 ದಾಖಲೆಗೆ ಆರೋಪಿಯು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಯಾವುದೇ ವ್ಯಕ್ತಿಯು  ಚಾಪಾ ಕಾಗದವನ್ನು ಖರೀದಿ ಮಾಡುತ್ತಾರೋ ಅವರ ಹೆಸರಿನಲ್ಲಿಯೇ ಚಾಪಾ ಕಾಗದವು ಮುದ್ರಣಗೊಳ್ಳುತ್ತದೆ ಎಂದರೆ ಸಾಕ್ಷಿಯು ಯಾರು ಬೇಕಾದರೂ ಬೇರೆಯವರ ಹೆಸರಿನಲ್ಲಿ ಚಾಪಾ ಕಾಗದವನ್ನು ಖರೀದಿ ಮಾಡಬಹುದು ಎಂದು ನುಡಿಯುತ್ತಾರೆ. ಯಾವುದೇ ವ್ಯಕ್ತಿಯು ಬೇರೆಯವರ ಹೆಸರಿನಲ್ಲಿ ಚಾಪಾ ಕಾಗದವನ್ನು ಖರೀದಿ ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಬೇರೆಯವರ ಹೆಸರಿನಲ್ಲಿ ಚಾಪಾ ಕಾಗದವನ್ನು ಖರೀದಿ ಮಾಡಿ ಕರಾರು ಪತ್ರ ಮಾಡಿದರೆ ಅದು ಅಪರಾಧ ಆಗುತ್ತದೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ನಾನು 2016 ರಲ್ಲಿ ಸುಧೀರ್ ವಕೀಲರ ಮೂಲಕ ಚೆಕ್ ಅಮಾನ್ಯ ದ ಬಗ್ಗೆ ನೋಟೀಸ್ ನೀಡಿರುತ್ತೇನೆ ಎಂದರೆ

ಸರಿಯಲ್ಲ. ನಂತರ ನಾನು ಆರೋಪಿಯ ಜೊತೆ ಸುಧೀರ್ ವಕೀಲರ ಕಚೇರಿಯಲ್ಲಿ ರಾಜಿ ಸಂದಾನ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಹಿಯನ್ನು ಇಂಗ್ಲಿಷ್ ಭಾಷೆಯಲ್ಲಿ ಮಾಡುತ್ತೇನೆ. ನಿಡಿ-1 ಮತ್ತು 2 ರಲ್ಲಿರುವ ಸಹಿ ನನ್ನದೇ ಸಹಿ ಎಂದರೆ ಸರಿಯಲ್ಲ. ನಾನು ಕನ್ನಡದಲ್ಲೂ ಸಹಿ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಪದವಿ ವಿದ್ಯಾಭ್ಯಾಸ ಮಾಡಿರುತ್ತೇನೆ.

4. ಆರೋಪಿಯು ನನ್ನ ತೋಟಕ್ಕೆ ಬಾಬು, ಅಪ್ಪಿ, ಆನಂದ ಲಕ್ಷ್ಮೀ ಮತ್ತು ಸುನೀಲ್ ರವರನ್ನು ನನ್ನ ತೋಟಕ್ಕೆ ಕೆಲಸಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತೋಟಕ್ಕೆ ಆರೋಪಿಯು ಕೂಲಿ ಆಳುಗಳನ್ನು ಕಳುಹಿಸಿದ ಬಗ್ಗೆ ನಾನು ಚೀಟಿಯಲ್ಲಿ ಬರೆದು ಸಹಿ ಮಾಡಿ ಆರೋಪಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-3 ಮತ್ತು 4 ರಂತೆ ನಾನು ಆರೋಪಿಗೆ ಬರವಣಿಗೆ ಮಾಡಿ ದಾಖಲೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-5 ದಾಖಲೆಯನ್ನು ನಾನು ಬರೆದು ಸಹಿ ಮಾಡಿ ಆರೋಪಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-6 ದಾಖಲೆಯನ್ನು ನಾನು ಬರೆದು ಕನ್ನಡದಲ್ಲಿ ಸಹಿ ಮಾಡಿ ಆರೋಪಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಕೂಲಿ ಆಳುಗಳನ್ನು ಸರಬರಾಜು ಮಾಡುವ ಬಗ್ಗೆ ನಾನು 20 ಸಾವಿರ ರೂಪಾಯಿ ನೀಡಿ ನಿಪಿ-1 ಚೆಕ್ಕನ್ನು ಆರೋಪಿಯಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕನ್ನು ನಾನು ಆರೋಪಿಯಿಂದ ಪಡೆದು ನನ್ನ ಸಂಬಂಧಿಯಾದ ದೂರುದಾರರ ಮೂಲಕ ಈ ಪ್ರಕರಣವನ್ನು ದಾಖಲು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ.

5. ಆರೋಪಿಯು ನನ್ನ ತೋಟಕ್ಕೆ ಕೂಲಿ ಆಳುಗಳುನ್ನು ಸರಬರಾಜು ಮಾಡುವುದು ಗೊತ್ತಾಗಬಾರದು ಎಂಬ ಉದ್ದೇಶದಿಂದ ನಾನು ದೂರುದಾರರ ಮೂಲಕ ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹೇಳಿರುವ ವ್ಯವಹಾರವು ನನ್ನ ಮತ್ತು ಆರೋಪಿಯ ಮದ್ಯೆ ಮಾತ್ರ

ನಡೆದಿರುತ್ತದೆ ಎಂದರೆ ಸರಿಯಿಲ್ಲ. ದೂರುದಾರರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-1 ರಿಂದ 6 ರಲ್ಲಿರುವ ದಾಖಲೆಯಲ್ಲಿ ಇರುವ ಸಹಿಗಳ ಬಗ್ಗೆ ಮತ್ತು ಬರವಣಿಗೆಯ ಬಗ್ಗೆ ತಜ್ಞರ ಅಭಿಪ್ರಾಯ ಪಡೆಯುವುದಕ್ಕೆ ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ.

**ಪಾಟೀ ಸವಾಲು ಶ್ರೀ ಎನ್.ಸಿ ವಕೀಲರಿಂದ –**

6. ನನಗೂ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿ. ನಿಡಿ-1 ರಿಂದ 6 ದಾಖಲಾತಿಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ದೂರುದಾರರು ಮತ್ತು ಆರೋಪಿಯ ವ್ಯವಹಾರಕ್ಕೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ.

ಮರು ವಿಚಾರಣೆ : ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ